# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂ.572/2017

ಸಿಡಬ್ಲ್ಯೂ-1 ಪಿಡಬ್ಲ್ಯೂ-1

| | |
|---|---|
| ಹೆಸರುಃ | ಶ್ರೀ ಸುರೇಶ |
| ತಂದೆಯ ಹೆಸರುಃ | ಪಾಂಡುರಂಗ ಒಡ್ಡರ |
| ವಯಸ್ಸುಃ | 35 ವರ್ಷ |
| ಉದ್ಯೋಗಃ | ಕೂಲಿ |
| ವಾಸ ಸ್ಥಳಃ | ಬಟಗೇರಾ (ಕೆ) ಗ್ರಾಮ |

ದಿನಾಂಕ 26-05-2022

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ನನ್ನ ತಂದೆ ಪಾಂಡುರಂಗ ಇವರು ಈಗ ಜೀವಿತ ಇರುವುದಿಲ್ಲ. ಅವರು ರಸ್ತೆ ಅಪಘಾತದಲ್ಲಿ ತೀರಿಕೊಂಡಿರುತ್ತಾರೆ. ಈಗ 5 ವರ್ಷಗಳ ಹಿಂದೆ ರಾತ್ರಿ 08.30 ಗಂಟೆಗೆ ನನ್ನ ತಂದೆ ಮೂತ್ರ ವಿಸರ್ಜನೆಗೆಂದು ನಮ್ಮ ಮನೆಯ ಎದುರುಗಡೆ ಸೇಡಂ-ಕೊಡಂಗಲ್ ರಸ್ತೆ ದಾಟಿ ಹೋಗಿದ್ದರು. ಆಗ ಒಂದು ದ್ವಿಚಕ್ರ ವಾಹನ ನಮ್ಮ ತಂದೆಗೆ ಹಾದಿತ್ತು . ಆಗ ನಾನು ನನ್ನ ತಂದೆಯನ್ನು ಹೋಗಿ ನೋಡಿದ್ದು ಅವರಿಗೆ ಹಣೆಗೆ, ಕಾಲು ಮತ್ತು ಮೂಗಿಗೆ ಪೆಟ್ಟಾಗಿತ್ತು. ಆಗ ಆ್ಯಂಬುಲೆನ್ಸನಲ್ಲಿ ನನ್ನ ತಂದೆಯನ್ನು ಸರಕಾರಿ ಆಸ್ಪತ್ರೆ ಸೇಡಂ ಇಲ್ಲಿ ಸೇರಿಕೆ ಮಾಡಿರುತ್ತೇವೆ. ನಂತರ ಹೆಚ್ಚಿನ ಚಿಕಿತ್ಸೆಗೆ ಗುಲಬರ್ಗಾ ಸರಕಾರಿ ಆಸ್ಪತ್ರೆಗೆ ಸೇರಿಕೆ ಮಾಡಿರುತ್ತೇವೆ. ಆದರೆ ನಮ್ಮ ತಂದೆ ಬೆಳಗ್ಗೆ 03.00 ಗಂಟೆಗೆ ತೀರಿಕೊಂಡಿರುತ್ತಾರೆ. ನನ್ನ ತಂದೆಗೆ ಅಪಘಾತಪಡಿಸಿದ ಮೋಟಾರ ಸೈಕಲ ನಂಬರ ಹೇಳಲು ಬರುವುದಿಲ್ಲ. ಘಟನೆಯ ಕುರಿತು ದೂರು ನೀಡಿರುತ್ತೇನೆ. ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಾನು ಅಪಘಾತ ಸ್ಥಳಕ್ಕೆ ಹೋದಾಗ ದ್ವಿಚಕ್ರ ವಾಹನ ಸವಾರ ಸ್ಥಳದಲ್ಲಿ ಇರಲಿಲ್ಲ . ಅಪಘಾತ ದ್ವಿಚಕ್ರ ವಾಹನದ ಸವಾರನ ತಪ್ಪಿನಿಂದ ಆಗಿರುತ್ತದೆ.

**(ಈ ಹಂತದಲ್ಲಿ ಸ.ಸ.ಅ.ರವರು ವಿನಂತಿಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.)**

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ಅಪಘಾತವಾದ ದಿನಾಂಕ 09.06.2017 ರಂದು ರಾತ್ರಿ 08.25 ಗಂಟೆಗೆ ಆಗಿರುತ್ತದೆ ಎಂದರೆ ಸರಿ. ಅಪಘಾತ ಸೇಡಂ-ಕೊಡಂಗಲ್ ರಸ್ತೆಯ ಮೇಲೆ ಆಗಿರುತ್ತದೆ ಎಂದರೆ ಸರಿ. ಅಪಘಾತಪಡಿಸಿದ ಮೋಟಾರ ಸೈಕಲ ನಂ.KA32-EM6545 ಎಂದರೆ ಸರಿ.

**(ಪಾಟೀ ಸವಾಲುಃ ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ**

**ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.) ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರ.ದ.ನ್ಯಾದಂ.ಸೇಡಂ.

**SYH*